ಅಪರ  ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ,
ಕುಣಿಗಲ್.

ಸಿ.ಸಿ.ನಂ. 4732-2023

ಸಿ.ಡಬ್ಲ್ಯೂ-02
ಪಿ.ಡಬ್ಲ್ಯೂ-03

**ಸಾಕ್ಷಿಗೆ ದಿಃ 21.01.2025 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಆರೋಪಿಪರಃ ಶ್ರೀ ಜಿ.ಎ.ಆರ್. ವಕೀರರಿಂದಃ**

ದಿಃ 29.07.2019 ರಂದು ನಾನು 4 ಗಂಟೆಯ ಸಮಯದಲ್ಲಿ ಯಡಿಯೂರು ಹೋಬಳಿಯ ಬೀರಗಾನಹಳ್ಳಿಯಲ್ಲಿ  ಗಸ್ತು ಮಾಡುತ್ತಿದ್ದೆ. ನಮ್ಮ ಪೇದೆಗಳನ್ನು ಎಲ್ಲಿ ಎಲ್ಲಿ ಕರ್ತವ್ಯಕ್ಕೆ ನೀಯೋಜನೆ ಮಾಡಿರುವ ಬಗ್ಗೆ ನಮ್ಮಲ್ಲಿ ಎಸ್.ಹೆಚ್. ಡಿ ಇರುವುದಿಲ್ಲ. ಸದರಿ ದಿನಾಂಕದಂದು ಯಡಿಯೂರು ಹೋಬಳಿಯ ಬೀರಗಾನಹಳ್ಳಿಯಲ್ಲಿ ಗಸ್ತು ಮಾಡುತ್ತಿದ್ದೇವು.ಈ ಪ್ರಕರಣದಲ್ಲಿ ನೀವು ಯಡಿಯೂರು ಹೋಬಳಿಯ ಬೀರಗಾನಹಳ್ಳಿಯಲ್ಲಿ ಗಸ್ತು ಮಾಡುತ್ತಿದ್ದೇವು ಎಂದು ಎಲ್ಲಿಯೂ ನಮೂದು ಮಾಡಿರುವುದಿಲ್ಲ ಎಂದರೆ ಸಾಕ್ಷಿ ನಾವು ಯಡಿಯೂರು ಹೋಬಳಿಯ ಬೀರಗಾನಹಳ್ಳಿಯಲ್ಲಿ ಹೋಗುತ್ತಿದ್ದಂತೆ ನಮ್ಮ ಮೇಲಾಧಿಕಾರಿಗಳು ಕರೆ ಮಾಡಿರುತ್ತಾರೆಂದು ಹೇಳುತ್ತಾರೆ.  ಪಂಚನಾಮೆಯಲ್ಲಿ ನಾವು ಯಡಿಯೂರು ಹೋಬಳಿಯ ಬೀರಗಾನಹಳ್ಳಿಯಲ್ಲಿ  ಇದ್ದಾಗ ನಮ್ಮ ಮೇಲಾಧಿಕಾರಿಗಳು ಕರೆ ಮಾಡಿದ ಬಗೆ ನಮೂದು ಮಾಡಿರುವುದಿಲ್ಲ.

ಚಾಸಾ 1 ಅವರು ಕರೆ ಮಾಡಿದಾಗ ಅವರು ಎಲ್ಲಿದ್ದರೂ ಎಂದು ನಮಗೆ ಹೇಳಿರುವುದಿಲ್ಲ.  ನಾವು ಹೊನ್ನೆಗೌಡನದೊಡ್ಡಿ ಕ್ರಾಸ್ ಬಳಿ ಚಾಸಾ 1 ಅವರು ಇದ್ದರು ಎಂದು ಹೇಳುತ್ತಾರೆ.  ನಮಗೆ ಅಕ್ರಮವಾಗಿ ಮದ್ಯ ಮಾರಾಟ ಮಾಡುವ ಬಗ್ಗೆ ಯಾರೂ ಸಹ ದೂರನ್ನು ನೀಡಿರುವುದಿಲ್ಲ. ಚಾಸಾ 1 ಅವರು ನೀಡಿದ ದೂರನ್ನು ನಾನು ನೋಡಿರುತ್ತೇನೆ ಈಗ ನನಗೆ ನೆನಪಿಲ್ಲ. ಚಾಸಾ 1 ಅವರು ಹೊನ್ನೆಗೌಡನದೊಡ್ಡಿಗೆ ಹೋಗಿ ದಾಳಿ ಮಾಡುವ ಕುರಿತು ನ್ಯಾಯಾಲಯದಿಂದ ಪರವಾನಿಗೆ ಪಡೆದ ಬಗ್ಗೆ ನನಗೆ ಗೊತ್ತಿಲ್ಲ.

ನಾವು ಬೀರಗಾನಹಳ್ಳಿಯಿಂದ ಕುಣಿಗಲ್‌ಗೆ ಬಂದು ನಂತರ ಗವಿಮಠ ಇಪ್ಪಾಡಿ ಚೌಡನಕೊಪ್ಪೆ ಮಾರ್ಗವಾಗಿ ಹೊನ್ನೇಗೌಡನದೊಡ್ಡಿ ಹೋಗಿರುತ್ತೇವೆ. ನಾವು ಹೊನ್ನೇಗೌಡನದೊಡ್ಡಿಗೆ ಹೋಗುವಾಗ ಚಾಸಾ 3 ಮತ್ತು 4 ಅವರು ತಾವರೆಕರೆ ಗ್ರಾಮದಲ್ಲಿದ್ದರು. ಚೌಡನಕೊಪ್ಪೆಯಿಂದ ತಾವರೆಕೆರೆ ಮೊದಲು ಸಿಗುತ್ತದೆಯಾ ಹೊನ್ನೆಗೌಡನದೊಡ್ಡಿ ಮೊದಲು ಸಿಗುತ್ತೆದೆಯಾ ಎಂದರೆ ಸಾಕ್ಷಿ ನನಗೆ ನೆನಪಿಲ್ಲವೆಂದು ಹೇಳುತ್ತಾರೆ. ಚೌಡನಕೊಪ್ಪೆ ನಂತರ ಹೊನ್ನೇಗೌಡನದೊಡ್ಡಿ ತದನಂತರ ತಾವರೆಕೆರೆ ಬರುತ್ತಿದ್ದು ನನಗೆ ಕುಣಿಗಲ್ ನ ಬಗ್ಗೆ ಮಾಹಿತಿ ಇಲ್ಲವೆಂದರೆ ಸರಿಯಲ್ಲ. ಹೊನ್ನೆಗೌಡನದೊಡ್ಡಿಯ ಮೊದಲು ಬರುವ ಊರು ಯಾವುದು ಎಂದು ನನಗೆ ಗೊತ್ತಿಲ್ಲ.

ನಾನು ಹೊನ್ನೇಗೌಡನದೊಡ್ಡಿ ಗ್ರಾಮವನ್ನು ನೋಡಿಲ್ಲ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ದಾಳಿ ಮಾಡಿದಾಗ 6.45 ಗಂಟೆ ಆಗಿತ್ತು ಎಂದು ಹೇಳುತ್ತಾರೆ. ದಾಳಿ ಮಾಡುವ ಸಮಯದಲ್ಲಿ ಚಾಸಾ 1 ಅವರು ಸ್ಥಳದಲ್ಲಿ ಇದ್ದರು ಎಂದು ಹೇಳುತ್ತಾರೆ. ಸಾಮಾನ್ಯವಾಗಿ ಎಲ್ಲಾ ಮದ್ಯದ ಬಾಟಲಗಳ ಮೇಲೆ ಲೇಬಲ್ ಮತ್ತು ಬ್ಯಾಚ್ ನಂ ಇರುತ್ತದೆ ಎಂದರೆ ಸರಿ. ನಾವು ಜಪ್ತು ಮಾಡಿದ ಮು. ಮಾ. ಗಳ ಮೇಲೆ ಬ್ಯಾಚ್ ನಂ ಮತ್ತು ಲೇಬಲ್ ಇದ್ದ ಬಗ್ಗೆ ನನಗೆ ನೆನಪಿಲ್ಲವೆಂದು ಹೇಳುತ್ತಾರೆ. ಬ್ಯಾಚ್ ನಂ ಆಧಾರದ ಮೇರಗೆ ಕರ್ನಾಟಕದ ಯಾವ ಜಿಲ್ಲೆ ಮತ್ತು ಯಾವ ತಾಲ್ಲೂಕಿಗೆ ಸರಬರಾಜು ಆಗಿರುತ್ತದೆಂದು ಗೊತ್ತಾಗುತ್ತದೆ ಎಂದರೆ ಸರಿ. ನಾವು ಜಪ್ತು ಮಾಡಿದ ಮು. ಮಾ. ಯಾವ ಜಿಲ್ಲೆಗೆ ಸೇರಿತ್ತು ಎಂದು ನನಗೆ ಗೊತ್ತಿರುವುದಿಲ್ಲ.

ಆರೋಪಿ ಮದ್ಯ ಮಾರಾಟ ಮಾಡುತ್ತಿದ್ದ ಅಂಗಡಿ ಯಾರಿಗೆ ಸೇರಿತ್ತು ಎಂದು ನಾನು ವಿಚಾರಣೆ ಮಾಡಿರುವುದಿಲ್ಲ. ಸದರಿ ಅಂಗಡಿಯಲ್ಲಿ ದಿನಸೆ ವಸ್ತುಗಳು ಸಹ ಇದ್ದವು. ಸದರಿ ಅಂಗಡಿ ಊರಿನ ಮದ್ಯ ಭಾಗದಲ್ಲಿ ಅಥವಾ ಹೊರಗೆ ಇದೆಯಾ ಎಂದು ನನಗೆ ಗೊತ್ತಿಲ್ಲವೆಂದು ಹೇಳುತ್ತಾರೆ.

ಸ್ಥಳದಲ್ಲಿ ಮದ್ಯ ಸೇವನೆ ಮಾಡಿದ ಬಗ್ಗೆ ಟೆಟ್ರಾ ಪ್ಯಾಕೇಟಗಳು ಮತ್ತು ಲೋಟಗಳು ಇದ್ದವು ಎಂದು ಹೇಳುತ್ತಾರೆ. ಅವುಗಳನ್ನು ಅವಶ್ಯಕತೆ ಇಲ್ಲದ ಕಾರಣ ಜಪ್ತು ಮಾಡಿಕೊಂಡಿರುವುದಿಲ್ಲ ಮತ್ತು ಪಂಚನಾಮೆಯಲ್ಲಿ ಬರೆದಿರುವುದಿಲ್ಲ. ಪೆಟ್ಟಿಗೆ ಅಂಗಡಿಯ ಮುಖ ಯಾವ ದಿಕ್ಕಿಗೆ ಇತ್ತು ಎಂದರೆ ನನಗೆ ನೆನಪಿಲ್ಲವೆಂದು ಹೇಳುತ್ತಾರೆ. ನಾನು ಹೊನ್ನೆಗೌಡನದೊಡ್ಡಿಗೆ ಹೋಗದೇ ಇರುವ ಕಾರಣ ಅಂಗಡಿ ಯಾವ ದಿಕ್ಕಿಗೆ ಇತ್ತು ಎಂದು ನನಗೆ ಗೊತ್ತಿಲ್ಲ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪಂಚನಾಮೆ ಸಮಯದಲ್ಲಿ ಚಾಸಾ 1 ಅವರು ಹಾಜರಿದ್ದರು. ಪಂಚನಾಮೆಯನ್ನು ಪಂಚರು ಹೇಳಿದ ಮೇರೆ ನಾನು ಬರೆದಿರುತ್ತೇನೆ. ಚಾಸಾ 1 ಅವರು ಪಂಚನಾಮೆಯುನ್ನು ಬರೆಯುವ ಬಗ್ಗೆ ನನಗೆ ಮಾಹಿತಿಯನ್ನು ನೀಡಿರುವುದಿಲ್ಲ. ಪಂಚನಾಮೆ ಬರೆಯುವಾಗ ಸಮಯ ಎಷ್ಟಾಗಿತ್ತು ಎಂದು ನನಗೆ ಗೊತ್ತಿಲ್ಲ.

ಚಾಸಾ 1 ಅವರು ಪಂಚನಾಮೆಗೆ ಸಹಿ ಮಾಡಿರುತ್ತಾರೆ. ನಾವು ಜಪ್ತು ಮಾಡಿದ ಮು. ಮಾ. ಗಳ ಬಾಟಲಗಳು ತುಂಬಿತ್ತು. ಒಂದೊಂದೆ ಮದ್ಯ ಪ್ಯಾಕೇಟಗಳನ್ನು ಪ್ರತ್ಯಕವಾಗಿ ಜಪ್ತು ಮಾಡಿರುವುದಿಲ್ಲ ಒಟ್ಟಾಗಿ ಮಾಡಿರುವುದಿಲ್ಲ. ನನ್ನ ಪ್ರಕಾರ ನ್ಯಾಯಾಲಯದ ಮುಂದೆ ಇರುವ ಮು. ಮಾ. ಗಳಿಗೆ ಸಂಬಂದಿಸಿದ ತೆರಿಗೆ ವಿಧಿಸಲಾಗಿರುತ್ತದೆ ಎಂದರೆ ಸರಿ. ತೆರಿಗೆ ವಿಧಿಸಿದ ಸುಮಾರು ಬಾಟಲಗಳು ನಮಗೆ ಸೇರಿದ ಮದ್ಯದ ಅಗಂಡಿಯಲ್ಲಿ ಸಿಗುತ್ತವೆ ಎಂದರೆ ಸರಿಯಲ್ಲ. ಆರೋಪಿಗೆ ಸೇರಿದ ಪೆಟ್ಟಗೆ ಅಂಗಡಿ ಇರುವುದಿಲ್ಲ ಆತ ಊರಿನಲ್ಲಿ ವ್ಯವಸಾಯ ಮಾಡುತ್ತಿದ್ದು ನಾನು ಮತ್ತು ಚಾಸಾ 1 ಅವರು ಸೇರಿ ನಮಗೆ ಕುಣಿಗಲ್‌ನಲ್ಲಿ ಇರುವ ಅಂಗಡಿಯಿಂದ ಮು. ಮಾ. ಗಳನ್ನು ಪಡೆದು ಅಂಕಿ ಸಂಖ್ಯೆಗಳ ಲೆಕ್ಕಕ್ಕಾಗಿ ಸುಳ್ಳು ಕೇಸನ್ನು ದಾಖಲು ಮಾಡಿರುತ್ತೇವೆ ಎಂದರೆ ಸರಿಯಲ್ಲ. ಪ್ರಕರಣಕ್ಕೂ ಆರೋಪಿಗೂ ಮು. ಮಾ.ಗೂ ಯಾವುದೇ ಸಂಬಂದ ಇಲ್ಲವೆಂದರೆ ಸರಿಯಲ್ಲ. ಪಂಚನಾಮೆಗೆ ಯಾರು ಸಹಿ ಮಾಡಿರುತ್ತಾರೆಂದು ನನಗೆ ಗೊತ್ತಿಲ್ಲವೆಂದರೆ ಸರಿಯಲ್ಲ. ಅದನ್ನು ಠಾಣೆಯಲ್ಲಿ ಸೃಷ್ಟಿ

ಮಾಡಿರುತ್ತೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ಈ ಪ್ರಕರಣದಲ್ಲಿ ಎಫ್.ಐ.ಆರ್ ಅನ್ನು ನಾನೇ ದಾಖಲು ಮಾಡಿರುತ್ತೇನೆ. ಅದಕ್ಕೆ ನನ್ನ ಸಹಿ ಇರುತ್ತದೆ. ಅದನ್ನು ನಿ.ಪಿ 4 ಎಂದು ಸಹಿಯನ್ನು ನಿ.ಪಿ 4 (ಎ) ಎಂದು ಗುರುತಿಸಲಾಯಿತು. ವಸ್ತುಗಳ ಪಟ್ಟಿಯ ಮೇಲೆ ನನ್ನ ಸಹಿ ಇರುತ್ತದೆ ಅದನ್ನು ನಿ.ಪಿ 2(ಬಿ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿಪರಃ ಶ್ರೀ ಜಿ.ಎ.ಆರ್. ವಕೀಲರಿಂದಃ**

ನನಗೆ ಪ್ರಕರಣದ ಬಗ್ಗೆ ಏನು ಮಾಹಿತಿ ಇಲ್ಲದಿದ್ದರೂ ಸಹ ಆರೋಪಿತನ ಮೇಲೆ ಸುಳ್ಳು ಎಫ್.ಐ.ಆರ್ ಅನ್ನು ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ.

ಸಹಿ/-

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.

ಕುಣಿಗಲ್.